ಇ) ನಾಲೆಯು ಸುಮಾರು 50 ವರ್ಷಗಳಷ್ಟು ಹಳೆಯದಾಗಿದ್ದು, ಲಭ್ಯವಿದ್ದ ಮಣ್ಣಿನಿಂದ ನಿರ್ಮಿಸಲಾಗಿರುವುದರಿಂದ ಕಾಲುವೆಯಲ್ಲಿ ಪದೇ ಪದೇ ಅಲ್ಲಲ್ಲಿ breaches ಮತ್ತು bhonga ಗಳು ಉಂಟಾಗುತ್ತಿವೆ.

ಈ) ಶ್ರೀ ಹೆಚ್.ಎಸ್. ಚಿನಿವಾಲ ಕಮಿಟಿ ವರದಿಯಲ್ಲಿ ಸೂಚಿಸಿರುವ, Remedies measures ಪ್ರಕಾರ ಪ್ರತಿ ವರ್ಷ ಹಂತ ಹಂತವಾಗಿ ಆಧುನೀಕರಣ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

ಉ) ಕಳೆದ 3 ವರ್ಷಗಳಲ್ಲಿ ಸಿಂಧನೂರು ವಿಭಾಗದಡಿ (ಸಿಂಧನೂರು ತಾಲ್ಲೂಕಿನಲ್ಲಿ) ತುಂಗಭದ್ರಾ ಎಡದಂಡೆ ನಾಲೆಗೆ ಖರ್ಚು ಮಾಡಿರುವ ವಿವರಗಳು ಈ ಕೆಳಗಿನಂತಿರುತ್ತವೆ:

ವರ್ಷ	ಕೈಗೊಳ್ಳಲಾಗಿರುವ ಕಾಮಗಾರಿಗಳ ಮೊತ್ತ (ರೂ. ಕೋಟಿ)
2007–08	ರೂ. 4.37
2008–09	ರೂ. 3.09
2009–10	ರೂ. 58.73

ಐ.ಟಿ.ಐ. ಕಾಲೇಜು ಮಂಜೂರಾತಿ

75(351) ಶ್ರೀ ನಾಡಗೌಡ ವೆಂಕಟರಾವ್ (ಸಿಂಧನೂರು) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿಂಧನೂರು ತಾಲ್ಲೂಕಿಗೆ ಐ.ಟಿ.ಐ. ಕಾಲೇಜನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು ಮತ್ತು ಎಲ್ಲಿ ಪ್ರಾರಂಭಿಸಲಾಗುವುದು;

ಇ) ಸಿಂಧನೂರು ತಾಲ್ಲೂಕಿಗೆ ಐ.ಟಿ.ಐ. ಕಾಲೇಜನ್ನು ಮಂಜೂರು ಮಾಡದೇ ಇರುವುದರಿಂದ ಸ್ಥಳೀಯ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸಿಂಧನೂರು ತಾಲ್ಲೂಕಿಗೆ ಈವರೆವಿಗೂ ಐ.ಟಿ.ಐ. ಕಾಲೇಜನ್ನು ಮಂಜೂರು ಮಾಡದೇ ಇರಲು ಸರ್ಕಾರಕ್ಕಿರುವ ತೊಂದರೆಗಳೇನು;

ಉ) ಹಾಗಿದ್ದಲ್ಲಿ, ಸಿಂಧನೂರು ತಾಲ್ಲೂಕಿಗೆ ಐ.ಟಿ.ಐ. ಕಾಲೇಜನ್ನು ಮಂಜೂರು ಮಾಡಲು ಸರ್ಕಾರಕ್ಕಿರುವ ತೊಂದರೆಗಳೇನು?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು)

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಸಿಂಧನೂರು ತಾಲ್ಲೂಕಿನಲ್ಲಿ 1 ಅನುದಾನಿತ ಸಂಸ್ಥೆ ಸೇರಿದಂತೆ 4 ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಆ ಕೇಂದ್ರಗಳ ಮೂಲಕ ತಾಲ್ಲೂಕಿನ ಯುವಕ ಯುವತಿಯರು ಕೌಶಲ್ಯ ತರಬೇತಿ ಪಡೆಯುತ್ತಿದ್ದಾರೆ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ನೇಕಾರರ ಸಮಸ್ಯೆಗಳು

76(355) ಶ್ರೀ ನರೇಂದ್ರಬಾಬು ನೆ.ಲ. (ಮಹಾಲಕ್ಷ್ಮೀ ಲೇಔಟ್) ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಮತ್ತು ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ನೇಕಾರರ ಸಂಖ್ಯೆ ಎಷ್ಟು;

ಆ) ನೇಕಾರರು ಎದುರಿಸುತ್ತಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ನೇಕಾರರ ಸಮಸ್ಯೆಗಳಿಗೆ ಸರ್ಕಾರ ತೆಗೆದುಕೊಂಡ ಕ್ರಮವೇನು;

ಈ) ರಾಜ್ಯ ಸರ್ಕಾರ ನೇಕಾರರಿಗೆ ನೀಡುತ್ತಿರುವ ಸೌಲಭ್ಯಗಳೇನು; (ವಿವರ ನೀಡುವುದು)?

ಶ್ರೀ ಗೋವಿಂದ ಎಂ. ಕಾರಜೋಳ (ಕನ್ನಡ ಮತ್ತು ಸಂಸ್ಕೃತಿ ಮತ್ತು ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು)

ಅ) 1995-96ರ ಗಣತಿ ಪ್ರಕಾರ ರಾಜ್ಯದಲ್ಲಿ ಒಟ್ಟು 3,17,469 ನೇಕಾರರಿರುತ್ತಾರೆ.